quickmarketreports.com

Date :08-02-2016

# ನಾಫೆಡ್‌ನಿಂದ ನೀರುಳ್ಳಿ ಖರೀದಿ ಇಮ್ಮಡಿ

ರಾಷ್ಟ್ರೀಯ ಕೃಷಿ ಸಹಕಾರಿ ಸಂಸ್ಥೆ ನಾಫೆಡ್ ನೀರುಳ್ಳಿ ಖರೀದಿ ಹೆಚ್ಚಳಗೊಳಿಸಲು ನಿರ್ಧರಿಸಿದ್ದು, ಈ ವರ್ಷ 7500 ಮೆಟ್ರಿಕ್ ಟನ್‌ಗಳಷ್ಟು ಖರೀದಿ ನಡೆಸಲಾಗುವುದೆನ್ನಲಾಗಿದೆ. ಇದರಿಂದ ಮುಂದಿನ ತಿಂಗಳುಗಳಲ್ಲಿ ನೀರುಳ್ಳಿ ದರ ಸ್ಥಿರವಾಗಲು ಸಹಾಯಕವಾಗುವ ಆಶಯವಿದೆಯೆನ್ನಲಾಗಿದೆ. ಹಿಂದಿನ ವರ್ಷ ನಾಫೆಡ್ ದಾಸ್ತಾನಿಗಾಗಿ 2,500 ಮೆಟ್ರಿಕ್ ಟನ್ ಬಲ್ಬ್ ನೀರುಳ್ಳಿ ಖರೀದಿಸಿತ್ತೆನ್ನಲಾಗಿದೆ.

ಹಿಂದಿನ ವರ್ಷ ಮಾರ್ಚ್‌ನಲ್ಲಿ ನಾಫೆಡ್ ಖರೀದಿ ನಿರ್ಧಾರ ತಳೆದಿದ್ದು ಖರೀದಿ ಪ್ರಾರಂಭ ಮೇಯಲ್ಲಿ ನಡೆದಿತ್ತೆನ್ನಲಾಗಿದೆ. ಈ ವರ್ಷ ಈಗ ಖರೀದಿ ನಿರ್ಧಾರ ಮಾಡಿದ್ದು ಮಾರ್ಚ್ ಅಥವಾ ಎಪ್ರಿಲ್ ತಿಂಗಳಿಂದ ಖರೀದಿಸಲಾಗುವುದೆನ್ನಲಾಗಿದೆ. ಲಾಸಲ್‌ಗಾಂವ್ ಮಾರುಕಟ್ಟೆ ಸಮಿತಿಯ ಚೆಯರ್‌ಮೆನ್ ಹಾಗೂ ನಾಫೆಡ್‌ನ ನಿರ್ದೇಶಕರೂ ಆಗಿರುವ ನಾನಾ ಸಾಹೇಬ್ ಪಾಟೀಲ್ ಅವರು ಫೆಬ್ರವರಿ 4, 2016ರ ಗುರುವಾರ ಖರೀದಿ ನಿರ್ಧಾರ ಮಾಡಲಾಗಿದೆಯೆಂದು ತಿಳಿಸಿದರೆನ್ನಲಾಗಿದೆ.

ಈ ವರ್ಷ ದರ ತೀವ್ರ ಇಳಿಕೆಯಾಗಿರುವುದರಿಂದ ರೈತರು ಸಂಕಷ್ಟಕ್ಕೊಳಗಾಗಿದ್ದಾರೆನ್ನಲಾಗಿದೆ. ನಾಫೆಡ್‌ನ ಖರೀದಿ ಹೆಚ್ಚಳದ ನಿರ್ಧಾರದಿಂದ ಮುಂದಿನ ತಿಂಗಳುಗಳಲ್ಲಿ ದರ ಸ್ಥಿರತೆ ಮತ್ತು ಹೆಚ್ಚಳವಾಗುವ ಆಶಯ ವಿದೆಯೆನ್ನಲಾಗಿದೆ. ಹೆಚ್ಚಿನ ಪ್ರಮಾಣದ ಆವಕದಿಂದ ಹಿಂದಿನ ಕೆಲವು ದಿವಸಗಳಿಂದ ಲಾಸಲ್‌ಗಾಂವ್ ಮಾರುಕಟ್ಟೆಯಲ್ಲಿ ನೀರುಳ್ಳಿ ದರ ಇಳಿಕೆಯಾಗಿದೆಯೆನ್ನಲಾಗಿದೆ. ಮುಂದಿನ 15 ದಿವಸಗಳಲ್ಲಿ ರಾಬಿ ಬೆಳೆಯ ನೀರುಳ್ಳಿ ಕಟಾವು ಪ್ರಾರಂಭವಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ರಾಬಿ ಬೆಳೆಯ ಒಟ್ಟು 60 ಶೇಕಡಾ ನೀರುಳ್ಳಿ ಮಹಾರಾಷ್ಟ್ರದಿಂದ ಪೂರೈಕೆಯಾಗುತ್ತಿದೆಯೆನ್ನಲಾಗಿದೆ.